# ಕರ್ನಾಟಕ ವಿಧಾನ ಸಭೆ

## ಶುಕ್ರವಾರ 18ನೇ ಜುಲೈ 2003 ರಂದು

## ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

## ಬೆಳಿಗ್ಗೆ 10-40 ಗಂಟೆಗೆ ಸಮಾವೇಶಗೊಂಡಿತು

## ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪ) ನವರು

## ಪೀಠವನ್ನು ಅಲಂಕರಿಸಿದ್ದರು

## 1. ಪ್ರಶ್ನೋತ್ತರಗಳು

### ಅ. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

**ಶ್ರೀ ಅಧ್ಯಕ್ಷರು** : ಮೊದಲನೆಯ ಪ್ರಶ್ನೆ ಯು.ಆರ್. ಸಭಾಪತಿಯವರದ್ದು ಅದನ್ನು ನಗರಾಭಿವೃದ್ಧಿ ಇಲಾಖೆಗ ವರ್ಗಾಹಿಸಲಾಗಿದೆ. ಏಕೆಂದರೆ, ಅವರು ನಗರಗಳಲ್ಲಿ ಸ್ತ್ರೀಶಕ್ತಿ ಯೋಜನೆಯನ್ನು ವಿಸ್ತರಿಸುವ ಬಗ್ಗೆ ಕೇಳಿದ್ದಾರೆ. ಆದ್ದರಿಂದ ಇದು ನಗರಾಭಿವೃದ್ಧಿ ಇಲಾಖೆಗೆ ವರ್ಗಾವಣೆಯಾಗಿದೆ.

ಮುಂದಿನ ಪ್ರಶ್ನೆ ಎನ್. ಯೋಗೀಶ್‌ಭಟ್ ರವರದು ಇದನ್ನು ಸಣ್ಣ ನೀರಾವರಿ ಇಲಾಖೆಗೆ ವರ್ಗಾಯಿಸಲಾಗಿದೆ.

**ಶ್ರೀ ಎನ್. ಯೋಗೀಶ್ ಭಟ್** : ಮಾನ್ಯ ಅಧ್ಯಕ್ಷರೆ, ನಮಗೆ ಸ್ಟಾರ್ಡ್ ಕ್ವೊಶ್ಚನ್ ಬಹಳ ಅಪರೂಪಕ್ಕೆ ಬರುವಂಥದ್ದು ಮತ್ತು ಇದರ ಬಗ್ಗೆ ಭಾರಿ ನೀರಾವರಿ ಸಚಿವರು ಉತ್ತರವನ್ನು ಕೊಡಬಹುದಿತ್ತು.

**ಅಧ್ಯಕ್ಷರು** : ಇದು ಏಕೆ ಹೀಗಾಯಿತು ಎಂಬುದು ನನಗೆ ಗೊತ್ತಾಗುತ್ತಿಲ್ಲ. ತಾವು ಬರೆಯುವಾಗ ಮೊದಲೇ ಯಾವ ಮಂತ್ರಿಗಳಿಗೆ ಸೇರುತ್ತದೆ ಎಂದು ಬರೆದುಬಿಟ್ಟರೆ ತಂಟೆ ಇಲ್ಲ. ನಮ್ಮ ಸಚಿವಾಲಯದ ಅಧಿಕಾರಿಗಳು ಆ ಕೆಲಸವನ್ನು ಮಾಡುತ್ತಾರೆ. ಅದೇನೂ ತೊಂದರೆ ಇಲ್ಲ. ಒಂದೊಂದು ಸಲ ಹೀಗೆ ಎಡವಟ್ಟಾಗಿಬಿಡುತ್ತದೆ.

**ಶ್ರೀ ಎನ್. ಯೋಗೀಶ್ ಭಟ್** : ಕುಡಿಯುವ ನೀರು, ವಿದ್ಯುತ್, ಮಿನಿ ಹೈಡಲ್ ಪ್ರಾಜೆಕ್ಟ್ ಎಲ್ಲದಕ್ಕೂ ಅನುಕೂಲವಾಗುವಂಥ ಯೋಜನೆ ಇದು.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ** : ಮಾನ್ಯ ಅಧ್ಯಕ್ಷರೆ, ನದಿ ನೀರು ಎಂದರೆ ಎಲ್ಲಾ ಕಡೆ ಗೊಂದಲ ಸೃಷ್ಟಿ ಮಾಡುವುದೇ ಆಗಿದೆ. ಪ್ರಶ್ನೆಯಲ್ಲೂ ಗೊಂದಲ ಸೃಷ್ಟಿ ಮಾಡಿದರೆ ಹೇಗೆ?

**ಅಧ್ಯಕ್ಷರು** : ಸರಿ ಹೋಗುತ್ತದೆ ಬಿಡಿ don't worry. I am here to clear the entire situation.

**ಶ್ರೀ ಎನ್. ಯೋಗೇಶ್ ಭಟ್** : ಇದನ್ನು ಮತ್ತೆ ಯಾವಾಗ ತೆಗೆದುಕೊಳ್ಳುತ್ತೀರಿ?

**ಅಧ್ಯಕ್ಷರು** : ಮುಂದಿನ ಶುಕ್ರವಾರ.

**ಅಧ್ಯಕ್ಷರು** : ಮಾನ್ಯ ಕಟ್ಟಾಸುಬ್ರಮಣ್ಯನಾಯ್ಡು ಹಾಗೂ ಎ. ನಾರಾಯಣಸ್ವಾಮಿಯವರ ಪ್ರಶ್ನೆ ಎರಡೂ ಸಹ ಸ್ವಲ್ಪ ಹೆಚ್ಚು ಕಮ್ಮಿಕಾಮನ್ ಕ್ವಶ್ಚನ್, ಎರಡನ್ನೂ ಕಂಬೈನ್ಡ್ ಆಗಿ ತೆಗೆದುಕೊಳ್ಳೋಣ. ಆದ್ದರಿಂದ ಮಾನ್ಯ ಪ್ರಶ್ನೆ ಎರಡೂ ಸಹ ಸ್ವಲ್ಪ ಹೆಚ್ಚು ಕಮ್ಮಿ ಕಾಮನ್ ನಾರಾಯಣಸ್ವಾಮಿಯವರೇ ತಾವೂ ಪ್ರಶ್ನೆಯನ್ನು ಕೇಳಿ.